| | |
|---|---|
| **Date:** 8.4.2022 | **Publication:** Sanjevani |
| **Page no.:** 7 | **Edition:** Bengaluru |
| **Headline:** Advice on the purchase of a health insurance policy | |



# ಆರೋಗ್ಯ ವಿಮಾ ಪಾಲಿಸಿ ಖರೀದಿಗೆ ಸಲಹೆ

ಬೆಂಗಳೂರು, ಏ 8- ಆರೋಗ್ಯ ವಿಮಾ ಪಾಲಿಸಿಯನ್ನು ಖರೀದಿಸಲು ಯಾವ ಅಂಶಗಳನ್ನು ನೆನಪಿಟ್ಟುಕೊಳ್ಳಬೇಕಿದೆ ಎಂದು ಬಜಾಜ್ ಆಲಿಯಾನ್ಸ್ ಜೆನೆರಲ್ ಇನ್ಶೂರನ್ಸ್ ನ ಆರೋಗ್ಯ ಆಡಳಿತ ತಂಡದ ಮುಖ್ಯಸ್ಥ ಭಾಸ್ಕರ್ ನೇರುರಕರ್ ಸಲಹೆ ನೀಡಿದ್ದಾರೆ.

'ಆರೋಗ್ಯವೇ ಭಾಗ್ಯ' ಎಂಬುದು ನಮ್ಮೆಲ್ಲರಿಗೂ ಚಿರಪರಿಚಿತ ನಾಣ್ಣುಡಿ. ಕಳೆದ ಎರಡು ವರ್ಷಗಳು ಈ ಪ್ರಾಚೀನ ನಾಣ್ಣುಡಿಯ ಮಹತ್ವವನ್ನು ನಮ್ಮೆಲ್ಲರಿಗೆ ಚೆನ್ನಾಗಿಯೇ ಕಲಿಸಿವೆ. ಇಂದಿನ ದಿನಗಳಲ್ಲಿ, ಆರೋಗ್ಯ ಸಂಬಂಧಿತ ವೆಚ್ಚಗಳು ಉಂಟಾದಲ್ಲಿ ಅವನ್ನು ನಿಭಾಯಿಸುವ ಒಂದು ಆರೋಗ್ಯ ವಿಮಾ ಪಾಲಿಸಿ ಅಂದರೆ ಹೆಲ್ತ್ ಇನ್ಶೂರನ್ಸ್ ಪಾಲಿಸಿಯು ಅತ್ಯವಶ್ಯಕವಾಗಿದೆ. ಆದರೆ, ಒಂದು ಹೆಲ್ತ್ ಕವರ್ ಖರೀದಿಸುವ ಮುಂಚೆ, ಆರೋಗ್ಯ ವಿಮೆಗೆ ಸಂಬಂಧಿತ ಕೆಲವು ಪ್ರಮುಖ ಶಬ್ದಗಳನ್ನು ತಿಳಿದುಕೊಳ್ಳುವುದು ಅವಶ್ಯಕ ಎಂದು ಅವರು ತಿಳಿಸಿದ್ದಾರೆ.

ಫ್ರೀ ಲುಕ್ ಅವಧಿ, ಗ್ರೇಸ್ ಅವಧಿ, ಡಿಡಕ್ಟಿಬಲ್ , ಕೋ-ಪೇ ಷರತ್ತು , ಆರೋಗ್ಯ ವಿಮೆಯಲ್ಲಿ ಕ್ಯುಮ್ಯುಲೇಟಿವ್ ಬೋನಸ್ ಗಳ ಬಗ್ಗೆ ತಿಳಿದುಕೊಳ್ಳುವುದು ಅಗತ್ಯ ಎಂದು ತಿಳಿಸಿದ್ದಾರೆ.

ಬಹುತೇಕ ವಿಮಾ ಸಂಸ್ಥೆಗಳು, ಪಾಲಿಸಿ ದಸ್ತಾವೇಜಿನ ಹಂಚಿಕೆಯ ದಿನಾಂಕದಿಂದ 15 ರಿಂದ 30 ದಿನಗಳ ಒಂದು ಫ್ರೀ-ಲುಕ್ ಅವಧಿಯನ್ನು ಒದಗಿಸುತ್ತಾರೆ. ಈ ಅವಧಿಯಲ್ಲಿ ನೀವು ಆ ಪಾಲಿಸಿಯನ್ನು ರದ್ದುಪಡಿಸುವ ಅಥವಾ ಮುಕ್ತಾಯಗೊಳಿಸುವ ಮತ್ತು ನೀವು ಪಾವತಿಸಿದ ಮೊತ್ತವನ್ನು ಮರಳಿ ಪಡೆಯುವ ಅವಕಾಶ ಇರುತ್ತದೆ. ಒಂದು ವೇಳೆ ಯಾವುದೇ ಷರತ್ತುಗಳು ನಿಮಗೆ ಸೂಕ್ತ ಎನಿಸದಿದ್ದಲ್ಲಿ, ನೀವು ಫ್ರೀ ಲುಕ್ ಅವಧಿಯ ಲಾಭ ಪಡೆದುಕೊಳ್ಳಬಹುದು.